# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

## ಒ.ಎಸ್.ನಂಃ 145/22

ಪಿಡಬ್ಲ್ಯುಃ – 1

ದಿನಾಂಕಃ 02.12.2025ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ. ಬಿ ಎಸ್ ಆರ್ ರವರಿಂದಃ–

ಯು. ಚೆಂಬು ಗ್ರಾಮದ ಸರ್ವೆ ನಂಬರ್ 8/97ಎ, 8/73, 8/36, 8/80 ಹಾಗೂ 8/152 ರಲ್ಲಿನ ಜಮೀನುಗಳು ನಮಗೆ ನಮ್ಮ ಪೂರ್ವಜರಿಂದ ಬಂದಿರುತ್ತದೆ ಎಂದರೆ ಸರಿ. ಯು. ಚೆಂಬು ಗ್ರಾಮದ ಸರ್ವೆ ನಂಬರ್ 8/302, 8/346 ಹಾಗೂ 8/24 ಜಮೀನುಗಳು ಪ್ರತಿವಾದಿಗಳಿಗೆ ಅವರ ಪೂರ್ವಜರಿಂದ ಬಂದಿರುತ್ತದೆ ಎಂದರೆ ಸರಿ. ಮೇಲೆ ಹೇಳಿದ ನಮ್ಮ ಬಾಪ್ತು ಸರ್ವೆ ನಂಬರುಗಳ ಜಮೀನಿನ ಉತ್ತರ ದಿಕ್ಕಿಗೆ ಒಂದು ತೋಡು ಹೋಗುತ್ತದೆ ಎಂದರೆ ಸರಿ. ಸದರಿ ತೋಡು ಆದ ಮೇಲೆ ಪ್ರತಿವಾದಿಗಳಿಗೆ ಸೇರಿದ ಮೇಲೆ ಹೇಳಿದ ಸರ್ವೆ ನಂಬರುಗಳ ಜಮೀನು ಬರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಜಮೀನು ಆದ ಮೇಲೆ ಬಾಲಂಬಿ, ಊರುಬೈಲು ಸಂಪಾಜೆ ರಸ್ತೆ ಬರುತ್ತದೆ ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಗಳ ಪೂರ್ವಜರ ಕಾಲದಲ್ಲಿ ನಮ್ಮ ಮೇಲೆ ಹೇಳಿದ ಸರ್ವೆ ನಂಬರ್ ಜಮೀನುಗಳು ಹಾಗೂ ಪ್ರತಿವಾದಿಗಳ ಮೇಲೆ ಹೇಳಿದ ಸರ್ವೆ ನಂಬರ್ ಜಮೀನುಗಳು ಗದ್ದೆ ಆಗಿತ್ತು ಎಂದರೆ ಸರಿ. ಆ ರೀತಿ ಗದ್ದೆ ಇದ್ದ ಸಂದರ್ಭದಲ್ಲಿ ನಮ್ಮ ಪೂರ್ವಜರು ಹಾಗೂ ಪ್ರತಿವಾದಿಗಳ ಪೂರ್ವಜರು ಗದ್ದೆ ಬದುವಿನ ಮೇಲೆ ಓಡಾಡುತ್ತಿದ್ದರು ಎಂದರೆ ಸರಿ. ಆ ಕಾಲದಲ್ಲಿ ಮೇಲೆ ಹೇಳಿದ ಸಂಪಾಜೆಯ ರಸ್ತೆಯಿಂದ ನಮ್ಮ ಹಾಗೂ ಪ್ರತಿವಾದಿಗಳ ಜಮೀನಿಗೆ ಓಡಾಡಲು ಗದ್ದೆ ಬದುವನ್ನು ಬಿಟ್ಟು ಬೇರೆ ಯಾವುದೇ ರಸ್ತೆ ಇರಲಿಲ್ಲ ಎಂದರೆ ಸರಿ. ಮೊದಲನೇ ಬಾರಿಗೆ ಪ್ರತಿವಾದಿಗೆ 1987 ರಲ್ಲಿ ಅವರು ಮೇಲೆ ಹೇಳಿದ ಸರ್ವೆ ನಂಬರು ಜಮೀನುಗಳಲ್ಲಿ ಸಂಪಾಜೆ ರಸ್ತೆಗೆ ಹೊಂದಿಕೊಳ್ಳುವಂತೆ ಒಂದು ರಸ್ತೆ ಮಾಡಿದ್ದರು ಎಂದರೆ ಸರಿ. ಆ ರೀತಿ ಪ್ರತಿವಾದಿಗಳು ಮಾಡಿಕೊಂಡಿದ್ದ ಅವರ ರಸ್ತೆಯಲ್ಲಿ, ಅವರವರ ಪೂರ್ವಿಕರ ಮನೆಗೆ ಓಡಾಡುತ್ತಿದ್ದರು ಎಂದರೆ ಸರಿ. ದಾವಾ ದಾರಿ ಸ್ವತ್ತನ್ನು ಪ್ರತಿವಾದಿಗಳು 2011 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ. 1987 ರಲ್ಲಿ ಮಾಡಿದ್ದ ಹಳೆಯ ರಸ್ತೆಯ ಪೂರ್ವಕ್ಕೆ ದಾವಾ ದಾರಿ ಸ್ವತ್ತು ಬರುತ್ತದೆ ಎಂದರೆ ಸರಿ. ದಾವಾ ದಾರಿ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ ಜಮೀನಿನ ಮಧ್ಯ ಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಮನೆ ಮತ್ತು ನನ್ನ ಜಾಗದ ಹಿಂಬದಿಯಲ್ಲಿ 2ನೇ ವಾದಿಗೆ ಮಂಜೂರಾಗಿರುವ ಆಸ್ತಿ ಇದೆ ಎಂದರೆ ಸರಿ. ವಾದಿಗಳಾದ ನಮಗೆ ನಮ್ಮ ಪೂರ್ವಜರಿಂದ ಬಂದ ಆಸ್ತಿಯ ಹಿಂಬದಿಯ ಜಾಗದಲ್ಲಿ ಪೈಸಾರಿ ಜಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ನಮಗೆ ಸರ್ಕಾರದಿಂದ ಮಂಜೂರಾದ ಜಾಗ ಇರುತ್ತದೆ ಎನ್ನುತ್ತಾರೆ. ನಮ್ಮ ಎಲ್ಲಾ ಆಸ್ತಿಗಳನ್ನು ದಾಟಿ ಮೇಲೆ ಮೇಲ್ಭಾಗದಲ್ಲಿ ಆನೆಹಳ್ಳ ನಿಡಿಂಜಿ ಸಿಮೆಂಟ್ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯ ಕೆಳ ಭಾಗದಲ್ಲಿ ನಮ್ಮ ಬಾಪ್ತು ಪಟ್ಟಾ ಜಮೀನು ಇದೆ ಎಂದರೆ ಸರಿ. 2ನೇ ವಾದಿಗೆ

ಸೇರಿದ ಜಾಗದಲ್ಲಿ ಕಲ್ಲು ಕೋರೆ ಇದೆ ಎಂದರೆ ಸರಿಯಲ್ಲ. ದಿಃ 10.08.2011 ರಂದು 8ನೇ ವಾದಿ ಚೆಂಬು ಗ್ರಾಮ ಪಂಚಾಯತಿಗೆ ಒಂದು ಅರ್ಜಿ ನೀಡಿದ್ದರು ಎಂದರೆ ಸರಿ. ಪ್ರತಿವಾದಿಗಳು 2011 ರಲ್ಲಿ ದಾವಾ ದಾರಿಯನ್ನು ಮಾಡುವಾಗ ಅವರು 1987 ರಲ್ಲಿ ಮಾಡಿದ್ದ ಹಳೆಯ ರಸ್ತೆಯನ್ನು ಮುಚ್ಚಿ ದಾವಾ ದಾರಿ ಮಾಡಿರುತ್ತಾರೆ ಎಂದರೆ ಸರಿ. 1987 ರಲ್ಲಿ ಗದ್ದೆಯಲ್ಲಿ ಕಾಫಿ ಹಾಗೂ ರಬ್ಬರ್ ಕೃಷಿ ಮಾಡುವ ಸಲುವಾಗಿ ಹಳೆಯ ರಸ್ತೆ ಮಾಡಿದ್ದರು ಎಂದರೆ ಸರಿ. 1987ರಿಂದಲೂ ಪ್ರತಿವಾದಿಗಳು ನಮಗೆ ಅವರು ಮಾಡಿದ್ದ ಆ ಸದರಿ ರಸ್ತೆಯಲ್ಲಿ ಓಡಾಡಲು ಅನುಮತಿ ಕೊಟ್ಟಿದ್ದರು ಎಂದರೆ ಸರಿ. ದಿಃ 10.08.2011 ರಂದು 8 ನೇವಾದಿ ಯಾವ ಉದ್ದೇಶಕ್ಕೆ ಚೆಂಬು ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ್ದರು ಎಂದು ಹೇಳಬಲ್ಲಿರಾ ಎಂದರೆ ಸಾಕ್ಷಿಯು ಪ್ರತಿವಾದಿಗಳು 1987 ರಲ್ಲಿ ಮಾಡಿದ್ದ ರಸ್ತೆಯನ್ನು ಮುಚ್ಚಿ ನಮಗೆ ಬೇರೆ ರಸ್ತೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರು, ಆದರೆ ಅವರು ನಮಗೆ ಬೇರೆ ರಸ್ತೆ ಮಾಡಿಕೊಡಲಿಲ್ಲ, ಆಗ ನಮಗೆ ನಮ್ಮ ಸ್ವತ್ತುಗಳಿಗೆ ಓಡಾಡಲು ತೊಂದರೆ ಆಗಿದ್ದು ಅದಕ್ಕೆ 8ನೇ ವಾದಿಯು ಪಂಚಾಯತಿಗೆ ಅರ್ಜಿ ನೀಡಿದ್ದರು ಎನ್ನುತ್ತಾರೆ. ಆಗ ನಮ್ಮ ಮತ್ತು ಪ್ರತಿವಾದಿಗಳ ನಡುವೆ ಹೊಸದಾಗಿ 2011ರಲ್ಲಿ ಮಾಡಿದ್ದ ದಾವಾ ದಾರಿ ಸ್ವತ್ತಿಗೆ ಇಬ್ಬರು ಸೇರಿ ಗೇಟನ್ನು ಇಟ್ಟುಕೊಳ್ಳಬೇಕು ಹಾಗೂ ರಸ್ತೆಯ ಎರಡೂ ಬದಿಗೆ ಬೇಲಿ ಹಾಕಿಕೊಳ್ಳಬೇಕು ಎಂದು ತೀರ್ಮಾನ ಆಗಿತ್ತು ಎಂದರೆ ಸರಿ. 2015ರಲ್ಲಿ ಬಾಲಂಬಿ-ಊರುಬೈಲು ಸಂಪಾಜೆ ರಸ್ತೆಯನ್ನು ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಕಾಂಕ್ರೀಟ್ ರಸ್ತೆ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆ ನಿರ್ಮಿಸಿದ ಕಾಂಟ್ರ್ಯಾಕ್ಟರ್ ಗೋಪಾಲಕೃಷ್ಣರವರು 2 ನೇ ವಾದಿಯ ಜಾಗದಲ್ಲಿರುವ ಕಲ್ಲುಕೋರೆಯ ಕಾಂಟ್ರ್ಯಾಕ್ಟನ್ನು ತೆಗೆದುಕೊಂಡಿದ್ದರು ಎಂದರೆ ಸರಿ. 2ನೇ ವಾದಿಯ ಜಾಗದಿಂದ ತಂದ ಕಲ್ಲನ್ನು 1ನೇ ಪ್ರತಿವಾದಿಯವರ ಅವರ ಬಾಪ್ತು ಸರ್ವೆ ನಂಬರ್ 8/302 ಜಮೀನಿನಲ್ಲಿ ಜೋಡಿಸಿಕೊಳ್ಳಲು ಅನುಮತಿ ಕೊಟ್ಟಿದ್ದರು ಎಂದರೆ ಸರಿ. 2ನೇ ವಾದಿಯ ಕಲ್ಲು ಕೋರೆಗೆ ಲಾರಿಯನ್ನು ತೆಗೆದುಕೊಂಡು ಹೋಗಲು ತೊಂದರೆ ಆಗುತ್ತದೆ ಎಂದು ಹೇಳಿ ಸದರಿ ಕಂಟ್ರ್ಯಾಕ್ಟರ್ ಗೋಪಾಲಕೃಷ್ಣರವರು ದಾವಾ ರಸ್ತೆಯ ಗೇಟನ್ನು ಬಿಚ್ಚಿಟ್ಟಿದ್ದರು ಎಂದರೆ ಸರಿ. ಹಾಗೆ ಬಿಚ್ಚಿಟ್ಟಿದ್ದ ಗೇಟು ಈಗ ನಮ್ಮ ಮನೆಯಲ್ಲಿ ಇದೆ ಎಂದರೆ ಸರಿ. ಇಲ್ಲಿಯವರೆಗೂ ನಾವು ಆ ಗೇಟನ್ನು ದಾವಾ ರಸ್ತೆಯಲ್ಲಿ ಮರುಸ್ಥಾಪಿಸಿಲ್ಲ ಎಂದರೆ ಸರಿ. ಈಗ ದಾವಾ ರಸ್ತೆಯ ಎರಡೂ ಬದಿ ಬೇಲಿ ಇಲ್ಲ ಎಂದರೆ ಸರಿ. ಕಂಟ್ರ್ಯಾಕ್ಟರ್ ರವರು 2ನೇ ವಾದಿಯ ಜಾಗಕ್ಕೆ ಲಾರಿಗಳನ್ನು ತೆಗೆದುಕೊಂಡು ಹೋಗುವಾಗ ಪ್ರತಿವಾದಿಗಳ ದಾವಾ ರಸ್ತೆಗೆ ಬದಿಗೆ ಹಾಕಿದ್ದ ಬೇಲಿಯನ್ನು ಡ್ಯಾಮೇಜ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಬಹಳ ಹಿಂದಿನಿಂದಲೂ ನಮ್ಮ ಆಸ್ತಿಗಳಿಗೆ ಹೋಗಲು ಆನೆಹಳ್ಳ ನಿಡಿಂಜಿ ರಸ್ತೆಯನ್ನು ಉಪಯೋಗಿಸುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ರಸ್ತೆಯನ್ನು ಹೊರತು ಪಡಿಸಿ ನಮ್ಮ ಜಾಗಕ್ಕೆ ಹೋಗಲು ಬೇರೆ ರಸ್ತೆ ಇಲ್ಲ ಎನ್ನುತ್ತಾರೆ. ದಿಃ 10.08.2011 ರಂದು 8ನೇ ವಾದಿ ಚೆಂಬು ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ ಮೇಲೆ ಅಲ್ಲಿ ಆದ ತೀರ್ಮಾನದಂತೆ ಪ್ರತಿವಾದಿಗಳು ನಮಗೆ ದಾವಾ ರಸ್ತೆಯಲ್ಲಿ ಓಡಾಡಲು ಅನುಮತಿ ನೀಡಿರುತ್ತಾರೆ ಎಂದರೆ ಸರಿ.

(ಪ್ರತಿವಾದಿ ವಕೀಲರು ಮುಂದುವರೆದ ಪಾಟಿ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ. ಎಂ. ಎಫ್. ಸಿ., ಮಡಿಕೇರಿ.**